# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ, ಹುಬ್ಬಳ್ಳಿ – 580025

ದೂರವಾಣಿ ಸಂಖ್ಯೆ: 0836–2222478


ಸಂಖ್ಯೆ: ಕರಾಕಾವಿ/ಸ್ಥಾ.ಅ/ಮರ ಹರಾಜು/2017–18/0116 ದಿನಾಂಕ: 19.04.2017

## ಸಂಕ್ಷಿಪ್ತ ಹರಾಜು ಪ್ರಕಟಣೆ

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯ ಈ ಕೆಳಗೆ ನಮೂದಿಸಿದ ಕಾಮಗಾರಿಗಾಗಿ **ಬಹಿರಂಗ ಹರಾಜನ್ನು** ವಿಶ್ವವಿದ್ಯಾಲಯದ ಶರತ್ತಿಗೆ ಒಳಪಟ್ಟು ಕರೆಯಲಾಗಿದೆ.

| ಅ. ಸಂ. | ಗಿಡಗಳು ಇರುವ ಸ್ಥಳ | ಹರಾಜು ದಿನಾಂಕ ಹಾಗೂ ಸಮಯ | ಅಂದಾಜು ಮಾಲು | ಹರಾಜು ಮಾಡುವ ಸ್ಥಳ |
|---|---|---|---|---|
| 1. | ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿಯ ಬಾಲಕರ ವಸತಿ ನಿಲಯ ಕಟ್ಟಡ ನಿರ್ಮಾಣ ಸ್ಥಳ | ಹರಾಜಿನಲ್ಲಿ ಭಾಗವಹಿಸಲು ನೊಂದಣಿ ಮಾಡುವುದು ದಿನಾಂಕ: 05.05.2017 ರಂದು ಮುಂಜಾನೆ 10.00 ರಿಂದ 11.00 ರವರೆಗೆ **ಹಾಗೂ** ಬಹಿರಂಗ ಹರಾಜಿನ ದಿನಾಂಕ: 05.05.2017 ಮದ್ಯಾಹ್ನ 12.00 ಘಂಟೆಗೆ | ನೀಲಗಿರಿ – 43<br>ಸಂಕೇಶ್ವರ – 02<br>ಆಕೇಶಿಯಾ – 01 | ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ |
| 2. | ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿಯ ಕುಲಪತಿಗಳ ವಸತಿಗೃಹ ಕಟ್ಟಡ ನಿರ್ಮಾಣ ಸ್ಥಳ | | ನೀಲಗಿರಿ – 104<br>ಆಕೇಶಿಯಾ – 30<br>ಸುಬಾಬುಲ್ – 04<br>ಬೇವು – 01 | |

**ಸೂಚನೆ:** 1. ಹರಾಜು ನಿಬಂಧನೆಗಳನ್ನು ವಿಶ್ವವಿದ್ಯಾಲಯದ ಸ್ಥಾನಿಕ ಅಭಿಯಂತರರ ಕಛೇರಿಯಲ್ಲಿ ಅಥವಾ ವೆಬ್‌ಸೈಟ್‌ನಲ್ಲಿ (www.kslu.ac.in) ಪಡೆಯಬಹುದಾಗಿದೆ.

2. ದಿನಾಂಕ: 05.05.2017 ರಂದು ಹರಾಜು ಆಗದೇ ಇದ್ದ ಪಕ್ಷದಲ್ಲಿ ಅಥವಾ ಗರಿಷ್ಠ ಮೊತ್ತವನ್ನು ಬಿಡ್ ಮಾಡಿದ ಹರಾಜುದಾರರು ನಿಗದಿತ ಸಮಯದಲ್ಲಿ ಹಣ ತುಂಬದೇ ಇದ್ದಲ್ಲಿ ದಿನಾಂಕ: 24.05.2017 ರಂದು ಬೆಳಗ್ಗೆ 10.00 ಘಂಟೆಯಿಂದ ಹರಾಜು ಪ್ರಕ್ರಿಯೆ ಮಾಡಲಾಗುವದು.

ಕುಲಸಚಿವರು

## ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಆವರಣದಲ್ಲಿರುವ ಮರಗಳ ಹರಾಜು ಪ್ರಕ್ರಿಯೆಗಳ ನಿಭಂದನೆಗಳು

---

1. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ನಿಗದಿತ ಹರಾಜು ಅರ್ಜಿ ನಮೂನೆಯ ಪ್ರತಿಯೊಂದು ಕಾಮಗಾರಿಯ ಟೆಂಡರ್ ಫಾರ್ಮ್ ಬೆಲೆ **ರೂ. 200.00 + ವ್ಯಾಟ್ ಕರ @ 14.5% ರೂ. 29.00 (ಒಟ್ಟು ರೂ. 229.00)** ಗಳ **ಡಿಮಾಂಡ್ ಡ್ರಾಫ್ಟ್‌ನ್ನು (Not Refundable) "ಹಣಕಾಸು ಅಧಿಕಾರಿಗಳು", ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ** ಇವರ ಹೆಸರಿನಲ್ಲಿ ರಾಷ್ಟ್ರೀಯ / ಶೆಡ್ಯೂಲ್ ಬ್ಯಾಂಕಿನಿಂದ ಪಡೆದು ಸಲ್ಲಿಸುವದು.
2. ಈ ಹರಾಜಿನಲ್ಲಿ ಭಾಗವಹಿಸುವ ಟೆಂಡರದಾರರು ಪ್ರತಿಯೊಂದು ಕಾಮಗಾರಿಗೆ **ಇ.ಎಮ್.ಡಿ ರೂ. 10,000.00** ಗಳನ್ನು **ಡಿಮಾಂಡ್ ಡ್ರಾಫ್ಟ್** ಮುಖಾಂತರ **"ಹಣಕಾಸು ಅಧಿಕಾರಿಗಳು" ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ** ಇವರ ಹೆಸರಿನಲ್ಲಿ ರಾಷ್ಟ್ರೀಯ / ಶೆಡ್ಯೂಲ್ ಬ್ಯಾಂಕಿನಿಂದ ಖರೀದಿಸಿ, ತಮ್ಮ ಹೆಸರನ್ನು **ಸ್ಥಾನಿಕ ಅಭಿಯಂತರರ ಕಛೇರಿಯಲ್ಲಿ** ನೊಂದಾಯಿಸಿಕೊಂಡು ಹರಾಜಿನಲ್ಲಿ ಭಾಗವಹಿಸುವದು.
3. ವಿಶ್ವವಿದ್ಯಾಲಯವು ಕಾಯ್ದಿಟ್ಟ ಕನಿಷ್ಠ ದರವು ರೂ. 95,000.00 (ಕುಲಪತಿಗಳ ವಸತಿಗೃಹ ಕಟ್ಟಡ ನಿರ್ಮಾಣ ಸ್ಥಳ) ರೂ. 1,20,000.00 (ಬಾಲಕರ ವಸತಿ ನಿಲಯ ಕಟ್ಟಡ ನಿರ್ಮಾಣ ಸ್ಥಳ) ಗಳಾಗಿರುತ್ತದೆ.
4. ಹರಾಜಿನಲ್ಲಿ ಬಿಡ್ಡುದಾರರು ಕನಿಷ್ಠ ಏರಿಕೆ ದರವು ರೂ. 1,000.00 ಗಳ ಅಂತರದಲ್ಲಿ ಬಿಡ್ಡು ಮಾಡುವದು.
5. ಆಯ್ಕೆಗೊಂಡ ಗುತ್ತಿಗೆದಾರರು ಹರಾಜು ಪ್ರಕ್ರೀಯೆ ಪೂರ್ಣಗೊಂಡ ಏಳು ದಿನಗಳ ಒಳಗಾಗಿ ಹರಾಜಿನಲ್ಲಿ ಸೂಚಿಸಿರುವ ಮೊತ್ತವನ್ನು ಹಾಗೂ ಈ ಕಾಮಗಾರಿಯ ಪ್ರಕ್ರಿಯೆಯಿಂದ ಉದ್ಭವಿಸಬಹುದಾದ **ರಾಜ ಧನ 12.00 %, ಆದಾಯ ತೆರಿಗೆ 3 %** ಹಾಗೂ ಇತರೆ ಕರ/ವ್ಯಾಟ್ 14.5 % **(Royalty and Taxes)** ಗಳನ್ನು **ಡಿ.ಡಿ.** ಮುಖಾಂತರ **"ಹಣಕಾಸು ಅಧಿಕಾರಿಗಳು" ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ** ಇವರ ಹೆಸರಿನಲ್ಲಿ ಗುತ್ತಿಗೆದಾರರೇ ಭರಿಸಬೇಕು ಹಾಗೂ ಭರಣ ಮಾಡಿದ ರಶೀದಿಯ ಪ್ರತಿಯನ್ನು ಸಲ್ಲಿಸುವದು. ಅನಂತರ ಈ ಕಛೇರಿಯ ಲಿಖಿತ ಆದೇಶವನ್ನು ಪಡೆದು ಕಟ್ಟಿಗೆಯನ್ನು ಎತ್ತುವದು.
6. ಹರಾಜಿನಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಫೋಟೋವಿರುವ ಗುರುತಿನ ಚೀಟಿಯ ಝೆರಾಕ್ಸ್ ಪ್ರತಿಯನ್ನು ಸಲ್ಲಿಸುವದು.

7. ಸದರ ಕಾಮಗಾರಿಯನ್ನು ~~20~~ 15 ದಿವಸಗಳ ಅವಧಿಯೊಳಗೆ ಪೂರ್ಣಗೊಳಿಸುವುದು. ಇಲ್ಲದೇ ಇದ್ದಲ್ಲಿ ನೀವು ಪಾವತಿಸಿದ ಹಣವನ್ನು ಮುಟ್ಟುಗೋಲು ಹಾಕಿಕೊಂಡು ನಿಮ್ಮ ಜವಾಬ್ದಾರಿಯ ಮೇಲೆ ಮರು ಹರಾಜು ಮಾಡಲಾಗುವದು ಹಾಗೂ ಅದರಿಂದ ಸರ್ಕಾರಕ್ಕೆ ಆಗುವ ಹಾನಿಯನ್ನು ನಿಮ್ಮಿಂದಲೇ ವಸೂಲಿ ಮಾಡಲಾಗುವದು.

8. ಹರಾಜಿನ ದಿವಸ ಬೇಡಿಕೆದಾರರು ಗುಂಪು ಮಾಡಿಕೊಂಡು ಹರಾಜಿನಲ್ಲಿ ಭಾಗವಹಿಸಿದ್ದು ತಿಳಿದು ಬಂದರೆ, ಅಂತವರಿಗೆ ಸದರ ಸವಾಲಿನಲ್ಲಿ ಬೇಡಿದ ಮೊತ್ತವನ್ನು ತಿರಸ್ಕರಿಸಲಾಗುವುದು ಮತ್ತು ಆ ಕುರಿತು ನೆಗೋಶಿಯೇನ್ ರಂದು ಅದರಲ್ಲಿ ಯಾರು ಹೆಚ್ಚಿನ ಬೇಡಿಕೆಗೆ ಪಡೆಯಲು ಒಪ್ಪುವವರಿಗೆ ಕ್ರಮ ಜರುಗಿಸುವದು.

9. ಈ ಕಾಮಗಾರಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ ನಂತರ ಇ.ಎಮ್.ಡಿ. ಹಣವನ್ನು ಹಿಂದಿರುಗಿಸಲಾಗುವದು.

10. ಈ ಕಾಮಗಾರಿಗೆ ಬೇಕಾಗಬಹುದಾದ ವಿದ್ಯುತ್‌ನ್ನು ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ವ್ಯವಸ್ಥೆ ಮಾಡಿಕೊಳ್ಳುವದು.

11. ಸದರ ಕಾಮಗಾರಿಗಾಗಿ ಬಳಸಲ್ಪಡುವ ಕೂಲಿಗಳಿಗೆ ವಿಮೆಯನ್ನು ಮಾಡಿಸುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ ಹಾಗೂ ಮುಂದೆ ಸಂಭವಿಸಬಹುದಾದ ಯಾವುದೇ ಅನಾಹುತಗಳಿಗೆ ವಿಶ್ವವಿದ್ಯಾಲಯವು ಜವಾಬ್ದಾರಿಯಾಗಿರುವದಿಲ್ಲ ಮತ್ತು ಕೂಲಿಗಾರರಿಗೆ ಕನಿಷ್ಠ ವೇತನವನ್ನು ಸಂದಾಯ ಮಾಡುವದು.

12. ಈ ಕಾಮಗಾರಿಯಲ್ಲಿ ಉದ್ಭವಿಸಬಹುದಾದ ಸಣ್ಣ ತುಂಡು ಹಾಗೂ ಇತರೆ ಕಸ ಕಡ್ಡಿಗಳನ್ನು ಸಂಗ್ರಹ ಮಾಡಿ ವಿಶ್ವವಿದ್ಯಾಲಯದ ಆವರಣದಿಂದ ತೆರವುಗೊಳಿಸುವದು.

13. ವಿಶ್ವವಿದ್ಯಾಲಯದ ಆವರಣದಲ್ಲಿ ಹರಾಜಿಗಾಗಿ ತೋರಿಸಿರುವ ಮರಗಳು ಹೇಗೆ ಇರುತ್ತವೆ ಅದೇ ರೀತಿಯಾಗಿ ಕೊಡಲಾಗುವದು (As it is Where it is). ಗುತ್ತೆಗೆದಾರರು ಸ್ವತಃ ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸುವದು.

14. ಹರಾಜನ್ನು ಯಾವುದೇ ಕಾರಣ ನೀಡದೇ ನಿರಾಕರಿಸುವ ಹಕ್ಕನ್ನು ವಿಶ್ವವಿದ್ಯಾಲಯವು ಕಾಯ್ದುಕೊಂಡಿರುತ್ತದೆ.

15. ಮರಗಳನ್ನು ಇದ್ದ ಸ್ಥಳದಲ್ಲಿ ನೀವು ನೋಡಿ ಖಚಿತಪಡಿಸಿಕೊಂಡಿರುವುದಾಗಿ ತಿಳಿಯಲಾಗಿದೆ.

16. ದಿನಾಂಕ: 05.05.2017 ರಂದು ಹರಾಜು ಆಗದೇ ಇದ್ದ ಪಕ್ಷದಲ್ಲಿ ಅಥವಾ ಗರಿಷ್ಠ ಮೊತ್ತವನ್ನು ಬಿಡ್ ಮಾಡಿದ ಹರಾಜುದಾರರು ನಿಗದಿತ ಸಮಯದಲ್ಲಿ ಹಣ ತುಂಬದೇ ಇದ್ದಲ್ಲಿ ದಿನಾಂಕ: 24.05.2017 ರಂದು ಬೆಳಗ್ಗೆ 10.00 ಘಂಟೆಯಿಂದ ಹರಾಜು ಪ್ರಕ್ರಿಯೆ ಮಾಡಲಾಗುವದು.

Resident Engineer